ಕರ್ನಾಟಕ ಸರ್ಕಾರ –ಆಯುಷ್ ಇಲಾಖೆ– ಆಯುಷ್ ಇಲಾಖೆ
ಜಿಲ್ಲಾ ಆಯುಷ್ ಅಧಿಕಾರಿಗಳ ಕಾರ್ಯಾಲಯ,
ಕೊಠಡಿ ಸಂಖ್ಯೆ:117 ಜಿಲ್ಲಾ ಆಡಳಿತ ಭವನ ನವನಗರ ಬಾಗಲಕೋಟೆ,–587103..
ದೂರವಾಣಿ : 08354–295588.ಮೋ : 9449847830
ಇಮೇಲ್ : dao.bagalkote09@gmail.com. ಇಲಾಖೆ ವೆಬ್ ಸೈಟ್ : www.karunadu.gov.in/ayush
ಕರ್ನಾಟಕ ಸರ್ಕಾರ

ಸಂಖ್ಯೆ : ಜಿಆಅಕಾಬಾ/ 07/ನ್ಯಾಮ್ (ಸಿಬ್ಬಂದಿ)/458/2023–24 ದಿನಾಂಕ:19.11.2024

# ತಿದ್ದುಪಡಿ ನೇಮಕಾತಿ ಪ್ರಕಟಣೆ

**ಗುತ್ತಿಗೆ ಆಧಾರದಲ್ಲಿ ಆಯುಷ್ ತಜ್ಞ ವೈದ್ಯರು/ಔಷಧಿ ವಿತರಕರು/ಮಸಾಜಿಸ್ಟ್/ಕ್ಷಾರಸೂತ್ರ ಅಟೆಂಡರ್/ಬಹು ಉದ್ದೇಶಿತ ಆರೋಗ್ಯ ಕಾರ್ಯಕರ್ತ ಹುದ್ದೆಗಳ ನೇಮಕಾತಿಗಾಗಿ ಪತ್ರಿಕಾ ಪ್ರಕಟಣೆ.**

********

ಮಾನ್ಯ ಆಯುಕ್ತರು, ಆಯುಷ್ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ :ಆಯುಷ್/69/ನ್ಯಾಮ್/2021–22. ದಿನಾಂಕ :17.01.2023 ರನ್ವಯ ಜಿಲ್ಲಾ ಆಯುಷ್ ಅಧಿಕಾರಿಗಳ ಕಾರ್ಯಾಲಯ, ಬಾಗಲಕೋಟೆ ಇವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಷ್ಟ್ರೀಯ ಆಯುಷ್ ಅಭಿಯಾನ (ಕೇಂದ್ರ ಪುರಸ್ಕೃತ ಯೋಜನೆ)ದಡಿಯಲ್ಲಿ ಮೇಲ್ದರ್ಜೆಗೇರಿಸಲಾದ ಬಾಗಲಕೋಟೆ/ಬೀಳಗಿ/ಜಮಖಂಡಿ ಆಯುಷ್ ಆಸ್ಪತ್ರೆಗಳಿಗೆ ಅಗತ್ಯವಿರುವ ಆಯುಷ್ ತಜ್ಞ ವೈದ್ಯರು/ ಅರೆ ವೈದ್ಯಕೀಯ ಸಿಬ್ಬಂದಿಯ ಹುದ್ದೆಗಳನ್ನು ತಾತ್ಕಾಲಿಕವಾಗಿ ಮೆರಿಟ್ ಕಂ ರೋಸ್ಟರ್ ಮೂಲಕ ಗುತ್ತಿಗೆ ಆಧಾರದ ಮೇಲೆ ಮುಂದಿನ ಆದೇಶದವರೆಗೆ ಮಾತ್ರ ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಮಾತ್ರ ಅರ್ಜಿಗಳನ್ನು ಸಲ್ಲಿಸುವುದು. ಅರ್ಜಿ ಸಲ್ಲಿಸಲು ಪ್ರಾರಂಭ **ದಿನಾಂಕ:19.11.2024 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:18.12.2024** ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್:bagalkot.nic.in ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಷರತ್ತು ಹಾಗೂ ನಿಬಂಧನೆಗಳು ಅನ್ವಯಿಸುತ್ತವೆ.

| ಕ್ರ ಸಂ | ಹುದ್ದೆಯ ಹೆಸರು | ಹುದ್ದೆಗಳು ಖಾಲಿ ಇರುವ ಸ್ಥಳ | ಖಾಲಿ ಇರುವ ಹುದ್ದೆಗಳ ಸಂಖ್ಯೆ | ಮೀಸಲಾತಿ | ಸಂಚಿತ ವೇತನ | ವಿದ್ಯಾರ್ಹತೆ |
|---|---|---|---|---|---|---|
| 01 | ತಜ್ಞ ವೈದ್ಯರು (04) | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಬಾಗಲಕೋಟೆ | 01 | ಸಾಮಾನ್ಯ(ಮಹಿಳಾ)–01<br>ಸಾಮಾನ್ಯ(ಅಂಗವಿಕಲ)–01<br>ಪ.ಜಾ–01<br>ಪ.ಪಂ(ಗ್ರಾಮೀಣ)–01 | 52,550/– +5000/– ಪಿ.ಜಿ ಭತ್ಯೆ | MS in Shalyatantra ಅಥವಾ MD in Panchakarma/Kaya chikitsa ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಹೊಂದಿರತಕ್ಕದ್ದು. |
| | | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಬೀಳಗಿ | 01 | | | |
| | | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಜಮಖಂಡಿ | 02 | | | |
| 02 | ಔಷಧಿ ವಿತರಕರು (03) | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಬಾಗಲಕೋಟೆ | 02 | ಸಾಮಾನ್ಯ(ಮಹಿಳಾ)–01<br>ಪ.ಜಾ–01<br>ಪ.ಪಂ(ಗ್ರಾಮೀಣ)–01 | 27,550/– | Bachelor of Pharmacy (B.Pharma) ಪದವಿಯ ಜೊತೆಗೆ ಆಸ್ಪತ್ರೆ /ಚಿಕಿತ್ಸಾಲಯ/ ಫಾರ್ಮಸಿಗಳಲ್ಲಿ ಕರ್ತವ್ಯ ನಿರ್ವಹಿಸಿರುವ ಅನುಭವ ಹೊಂದಿರತಕ್ಕದ್ದು, B.Pharma ಅಭ್ಯರ್ಥಿಯು ದೊರೆಯದ ಪಕ್ಷದಲ್ಲಿ ಕನಿಷ್ಟ 02 ವರ್ಷ ಅನುಭವವಿರುವ Diploma in Pharmacy (D.Pharma) ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು. ಕಂಪ್ಯೂಟರ್ ಜ್ಞಾನ ಕಡ್ಡಾಯವಾಗಿರುತ್ತದೆ. |
| | | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಜಮಖಂಡಿ | 01 | | | |

| | | | | | | |
|---|---|---|---|---|---|---|
| 03 | ಮಸಾಜಿಸ್ಟ್ (ಪುರುಷ) (01) | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಜಮಖಂಡಿ | 01 | ಪ.ಜಾ–01 (ಪುರುಷ) | 18,500/– | ಕನಿಷ್ಠ 10ನೇ ತರಗತಿ ವಿದ್ಯಾರ್ಹತೆ ಹೊಂದಿರತಕ್ಕದ್ದು ಹಾಗೂ ಆಸ್ಪತ್ರೆ/ ಚಿಕಿತ್ಸಾಲಯಗಳಲ್ಲಿ ಕನಿಷ್ಠ 02 ವರ್ಷ ಕರ್ತವ್ಯ ನಿರ್ವಹಿಸಿರುವ ಅನುಭವ ಹೊಂದಿರತಕ್ಕದ್ದು. |
| 04 | ಮಸಾಜಿಸ್ಟ್ (ಮಹಿಳಾ) (02) | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಬಾಗಲಕೋಟೆ | 01 | ಸಾಮಾನ್ಯ (ಮಹಿಳಾ)–01<br>ಪ.ಜಾ– 01 (ಮಹಿಳಾ) | 18,500/– | ಕನಿಷ್ಠ 10ನೇ ತರಗತಿ ವಿದ್ಯಾರ್ಹತೆ ಹೊಂದಿರತಕ್ಕದ್ದು ಹಾಗೂ ಆಸ್ಪತ್ರೆ/ ಚಿಕಿತ್ಸಾಲಯಗಳಲ್ಲಿ ಕನಿಷ್ಠ 02 ವರ್ಷ ಕರ್ತವ್ಯ ನಿರ್ವಹಿಸಿರುವ ಅನುಭವ ಹೊಂದಿರತಕ್ಕದ್ದು. |
| | | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಜಮಖಂಡಿ | 01 | | | |
| 05 | ಕ್ಷಾರ ಸೂತ್ರ ಅಟೆಂಡರ್ (02) | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಬಾಗಲಕೋಟೆ | 01 | ಸಾಮಾನ್ಯ(ಮಹಿಳಾ) –01<br>ಪ.ಜಾ–01 | 18,500/– | ಕನಿಷ್ಠ 10ನೇ ತರಗತಿ ವಿದ್ಯಾರ್ಹತೆ ಹೊಂದಿರತಕ್ಕದ್ದು ಹಾಗೂ ಆಸ್ಪತ್ರೆ/ ಚಿಕಿತ್ಸಾಲಯಗಳಲ್ಲಿ ಕನಿಷ್ಠ 02 ವರ್ಷ ಕರ್ತವ್ಯ ನಿರ್ವಹಿಸಿರುವ ಅನುಭವ ಹೊಂದಿರತಕ್ಕದ್ದು. |
| | | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಜಮಖಂಡಿ | 01 | | | |
| 06 | ಬಹು ಉದ್ದೇಶಿತ ಆರೋಗ್ಯ ಕಾರ್ಯಕತರ್ (01) | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಬೀಳಗಿ | 01 | ಸಾಮಾನ್ಯ–01 | 16,900/– | ಕನಿಷ್ಠ 10ನೇ ತರಗತಿ ವಿದ್ಯಾರ್ಹತೆ ಹೊಂದಿರತಕ್ಕದ್ದು ಹಾಗೂ ಆಸ್ಪತ್ರೆ/ ಚಿಕಿತ್ಸಾಲಯಗಳಲ್ಲಿ ಕನಿಷ್ಠ 01 ವರ್ಷ ಕರ್ತವ್ಯ ನಿರ್ವಹಿಸಿರುವ ಅನುಭವ ಹೊಂದಿರತಕ್ಕದ್ದು. ಕಂಪ್ಯೂಟರ್ ಜ್ಞಾನ ಕಡ್ಡಾಯವಾಗಿರುತ್ತದೆ. |

## ❖ ನೇಮಕಾತಿ ನಿಯಮ ಮತ್ತು ಷರತ್ತುಗಳು :–

1. ಅರ್ಜಿ ಸಲ್ಲಿಸಲು ಯಾವುದೇ ಶುಲ್ಕವಿರುವುದಿಲ್ಲ.
2. ಅರ್ಜಿಗಳನ್ನು ಕೇವಲ ಆನ್‌ಲೈನ್ ಮೂಲಕ ಸಲ್ಲಿಸುವುದು. ಅರ್ಜಿ ಸಲ್ಲಿಸಲು ಪ್ರಾರಂಭ **ದಿನಾಂಕ:19.11.2024**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **18.12.2024**
3. ಅರ್ಜಿಗಳನ್ನು ಆನ್‌ಲೈನ್ ಹೊರತು ಪಡಿಸಿ ಇತರೆ ಯಾವುದೇ ಮೂಲಗಳಿಂದ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
4. ಕರ್ನಾಟಕ ಸರ್ಕಾರದ ಸಾಮಾನ್ಯ ನೇಮಕಾತಿ ನಿಯಮಗಳನ್ವಯ ವಯೋಮಿತಿಯನ್ನು ಪರಿಗಣಿಸಲಾಗುವುದು. (ಎಲ್ಲಾ ಹುದ್ದೆಗಳಿಗೆ ಕನಿಷ್ಠ 18 ವರ್ಷ, **18.12.2024** ಅಂತ್ಯಕ್ಕೆ ಗರಿಷ್ಠ ವಯೋಮಿತಿ **(ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 166 ಸೇನೆನಿ 2024 ಬೆಂಗಳೂರು, ದಿನಾಂಕ: 10.09.2024) ರನ್ವಯ ಒಂದು ಬಾರಿಗೆ ಮಾತ್ರ ಅನ್ವಯವಾಗುವಂತೆ** ಪ. ಜಾತಿ, ಪ. ಪಂಗಡ ಹಾಗೂ ಪ್ರವರ್ಗ I–43 ವರ್ಷ, 2A, 2B, 3A, 3B-41 ವರ್ಷ, ಇತರೆ ಸಾಮಾನ್ಯ–38 ವರ್ಷ
5. ಸದರಿ ಹುದ್ದೆಗಳಿಗೆ ತಪ್ಪು ಮಾಹಿತಿ/ದಾಖಲೆಗಳನ್ನು ಹಾಜರುಪಡಿಸಿ ನೇಮಕಾತಿ ಹೊಂದಿರುವುದು ದೃಡಪಟ್ಟಲ್ಲಿ ಯಾವುದೇ ಪೂರ್ವ ಮಾಹಿತಿ ನೀಡದೆ ನೇಮಕಾತಿ ರದ್ದು ಪಡಿಸಿ ಅಂತಹ ಅಭ್ಯರ್ಥಿಯ ವಿರುದ್ಧ ಕ್ರಿಮಿನಲ್ ದಾವೆ ಹೂಡಲಾಗುವುದು.
6. ಮಸಾಜಿಸ್ಟ್ ಮತ್ತು ಕ್ಷಾರಸೂತ್ರ ಅಟೆಂಡರ್ ಹುದ್ದೆಗಳಿಗೆ ಪ್ರಾಯೋಗಿಕವಾಗಿ (ಪ್ರಾಕ್ಟಿಕಲ್) ಪರೀಕ್ಷೆ ಮೂಲಕ ಆಯ್ಕೆ ಮಾಡಲಾಗುವುದು.
7. ಒಬ್ಬನೇ ಅಭ್ಯರ್ಥಿಯು ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸಿದ್ದಲ್ಲಿ ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಬೇಕು.
8. ಜಿಲ್ಲಾ ಆಯುಷ್ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ.

9. ಸದರಿ ನೇಮಕಾತಿ ಪ್ರಕಟಣೆಯ ವಿವಿರಗಳನ್ನು ಬಾಗಲಕೋಟೆ NIC Website Link: bagalkot.nic.in ನಲ್ಲಿ ವೀಕ್ಷಿಸಬಹುದಾಗಿದೆ.

10. ತಜ್ಞ ವೈದ್ಯರು ಮತ್ತು ಇತರೆ ಹುದ್ದೆಗಳ ನೇಮಕಾತಿಯನ್ನು ನಿಗದಿಪಡಿಸಲಾದ ಶೈಕ್ಷಣಿಕ ಅರ್ಹತೆಯಲ್ಲಿ ಪಡೆದ ಅಂಕಗಳು, ಸಂದರ್ಶನ ಮತ್ತು ಅನುಭವದ ಆಧಾರದ ಮೇಲೆ ನಡೆಸಲಾಗುವುದು.

11. ಮಾನ್ಯ ಅಧ್ಯಕ್ಷರು, ಜಿಲ್ಲಾ ಆಯುಷ್ ಸಮಿತಿ ಬಾಗಲಕೋಟೆ ಹಾಗೂ ಜಿಲ್ಲಾಧಿಕಾರಿಗಳು, ಬಾಗಲಕೋಟೆ ಇವರ ಅಧ್ಯಕ್ಷತೆಯಲ್ಲಿ ಆಯ್ಕೆ ಪ್ರಕ್ರಿಯೆಯನ್ನು ಮೇರಿಟ್ ಕಂ ರೋಸ್ಟರ್ ಮೂಲಕ ಮೀಸಲಾತಿ ನಿಯಮಗಳನ್ವಯ ನೇಮಕಾತಿ ಮಾಡಲಾಗುವುದು. ಎಲ್ಲಾ ಹುದ್ದೆಗಳು ಗುತ್ತಿಗೆ ಆಧಾರದ ಮೇಲೆ ಸಂಪೂರ್ಣ ತಾತ್ಕಾಲಿಕ ಹುದ್ದೆಗಳಾಗಿದ್ದು, ಕಾಲ ಕಾಲಕ್ಕೆ ಸರ್ಕಾರದಿಂದ/ಆಯುಷ್ ನಿರ್ದೇಶನಾಲಯದಿಂದ ಹೊರಡಿಸುವ ಆದೇಶದ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತವೆ.

12. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆಯುಷ್ ಅಧಿಕಾರಿಗಳ ಕಾರ್ಯಾಲಯ, ಬಾಗಲಕೋಟೆ. ಇಲ್ಲಿ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು.

**ವಿಶೇಷ ಸೂಚನೆ:-** ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಜನ್ಮ ದಿನಾಂಕ ಸೂಚಿಸಿರುವ ಸರ್ಕಾರಿ ದಾಖಲೆಗಳನ್ನು ಒದಗಿಸಲು ಸೂಚಿಸಲಾಗಿದೆ.

ಜಿಲ್ಲಾ ಆಯುಷ್ ಅಧಿಕಾರಿಗಳು, ಬಾಗಲಕೋಟೆ

ಜಿಲ್ಲಾ ಆಯುಷ್ ಅಧಿಕಾರಿಗಳು
ಬಾಗಲಕೋಟೆ

# ಖಾಲಿ ಇರುವ ಹುದ್ದೆಗಳ ಮೀಸಲಾತಿ ವಿವರಗಳು.

| ಕ್ರ ಸಂ | ಹುದ್ದೆಯ ಹೆಸರು | ಹುದ್ದೆಗಳು ಖಾಲಿ ಇರುವ ಸ್ಥಳ | ಖಾಲಿ ಇರುವ ಹುದ್ದೆಗಳ ಸಂಖ್ಯೆ | ಮೀಸಲಾತಿ ವಿವರ. |
|---|---|---|---|---|
| 01 | ತಜ್ಞ ವೈದ್ಯರು (04) | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಬಾಗಲಕೋಟೆ | 01 | ಸಾಮಾನ್ಯ (ಮಹಿಳಾ)-01<br>ಸಾಮಾನ್ಯ (ಅಂಗವಿಕಲ)-01<br>ಪ.ಜಾ-01<br>ಪ.ಪಂ(ಗ್ರಾಮೀಣ)-01 |
| | | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಬೀಳಗಿ | 01 | |
| | | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಜಮಖಂಡಿ | 02 | |
| 02 | ಔಷಧಿ ವಿತರಕರು (03) | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಬಾಗಲಕೋಟೆ | 02 | ಸಾಮಾನ್ಯ (ಮಹಿಳಾ)-01<br>ಪ.ಜಾ-01<br>ಪ.ಪಂ(ಗ್ರಾಮೀಣ)-01 |
| | | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಜಮಖಂಡಿ | 01 | |
| 03 | ಮಸಾಜಿಸ್ಟ್ (ಪುರುಷ) (01) | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಜಮಖಂಡಿ | 01 | ಪ.ಜಾ-01 (ಪುರುಷ) |
| 04 | ಮಸಾಜಿಸ್ಟ್ (ಮಹಿಳಾ), (02) | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಬಾಗಲಕೋಟೆ | 01 | ಸಾಮಾನ್ಯ(ಮಹಿಳಾ)-01<br>ಪ.ಜಾ(ಮಹಿಳಾ)-01 |
| | | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಜಮಖಂಡಿ | 01 | |
| 05 | ಕ್ಷಾರ ಸೂತ್ರ ಅಟೆಂಡರ್ (02) | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಬಾಗಲಕೋಟೆ | 01 | ಸಾಮಾನ್ಯ(ಮಹಿಳಾ)-01<br>ಪ.ಜಾ-01 |
| | | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಜಮಖಂಡಿ | 01 | |
| 06 | ಬಹು ಉದ್ದೇಶಿತ ಆರೋಗ್ಯ ಕಾರ್ಯಕರ್ತ (01) | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಬೀಳಗಿ | 01 | ಸಾಮಾನ್ಯ-01 |
| | | ಒಟ್ಟು ಹುದ್ದೆಗಳು | **13** | |

ಜಿಲ್ಲಾ ಆಯುಷ್ ಅಧಿಕಾರಿಗಳು, ಬಾಗಲಕೋಟೆ

ಜಿಲ್ಲಾ ಆಯುಷ್ ಅಧಿಕಾರಿಗಳು
ಬಾಗಲಕೋಟೆ

# ವಿಶೇಷ ಸೂಚನೆಗಳು

**ಈ ಕೆಳಕಂಡ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಅರ್ಜಿಯೊಂದಿಗೆ ಅಪ್‌ಲೋಡ್ ಮಾಡುವುದು.**

**ಯಾವುದೇ ಒಂದು ದಾಖಲೆ ಇಲ್ಲದಿದ್ದರೂ ನಿಮ್ಮ ಅರ್ಜಿಯನ್ನು ಮೂನ್ಸೂಚನೆ ನೀಡದೇ ತಿರಸ್ಕರಿಸಲಾಗುವುದು.**

| | |
|---|---|
| 1 | ಜನ್ಮ ದಿನಾಂಕ ದೃಢೀಕರಿಸುವ ದಾಖಲಾತಿ (ಜನನ ಪ್ರಮಾಣ ಪತ್ರ/ಎಸ್.ಎಸ್.ಎಲ್.ಸಿ/ಎಲ್.ಸಿ (ಟಿ.ಸಿ)) |
| 2 | S.S.L.C ಅಂಕಪಟ್ಟಿ |
| 3 | ಆಯುರ್ವೇದ ಪದವಿಯ ಎಲ್ಲ ವರ್ಷಗಳ ಅಂಕಪಟ್ಟಿ ಪ್ರಮಾಣ ಪತ್ರಗಳು. |
| 4 | ಆಯುರ್ವೇದ ಪದವಿ ನಂತರ ಹೌಸ್ ಸರ್ಜನ್ ಮುಗಿಸಿದ ಪ್ರಮಾಣ ಪತ್ರ. |
| 5 | ಆಯುರ್ವೇದ ವೈದ್ಯ ಪದ್ಧತಿಯಲ್ಲಿ ಸ್ನಾತಕೋತ್ತರ ಪದವಿ ಹೊಂದಿದ ಬಗ್ಗೆ ಶ್ರೇಣಿ(ಗ್ರೇಡ್)ಸಹಿತ ಸೂಚಿಸುವ ಪ್ರಮಾಣ ಪತ್ರ. |
| 6 | ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಳಿಯಲ್ಲಿನ ನೊಂದಣಿ ಪ್ರಮಾಣ ಪತ್ರ. |
| 7 | ಆಯುರ್ವೇದ ವೈದ್ಯ ಪದ್ಧತಿಯಲ್ಲಿ ಕನಿಷ್ಠ ಮೂರು ವರ್ಷಗಳ ಅನುಭವ ಹೊಂದಿದ ಬಗ್ಗೆ ಪ್ರಮಾಣ ಪತ್ರ. |
| 8 | 1 ರಿಂದ 10 ನೇಯ ತರಗತಿಗಳವರೆಗೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿದ ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರ. |
| 9 | ಜಿಲ್ಲಾ ಶಸ್ತ್ರಚಿಕಿತ್ಸಕರಿಂದ ಪಡೆದ ಅಂಗವಿಕಲ ಪ್ರಮಾಣ ಪತ್ರ |
| 10 | ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ |
| 11 | ಆಸ್ಪತ್ರೆ/ಚಿಕಿತ್ಸಾಲಯಗಳಲ್ಲಿ ಕರ್ತವ್ಯ ನಿರ್ವಹಿಸಿದ ಅನುಭವ ಹೊಂದಿದ ಬಗ್ಗೆ ಪ್ರಮಾಣ ಪತ್ರ |

## ಅನುಬಂಧ-6ರ ನಿಯಮಗಳು

| | | | |
|---|---|---|---|
| 1 | ಗುತ್ತಿಗೆ ಆಧಾರದ ಮೇಲೆ ಮಾಡುವ ನೇಮಕಾತಿಯು ಸಂಪೂರ್ಣ ತಾತ್ಕಾಲಿಕ ಹಾಗೂ ದಿನಾಂಕ **31.03.2025**ಕ್ಕೆ ಕೊನೆಗೊಳ್ಳುತ್ತದೆ. | | |
| 2 | ಕ.ನಾ.ಸೇ(ಸಾಮಾನ್ಯ ನೇಮಕಾತಿ)ನಿಯಮಗಳು ರೀತ್ಯ ನಿಗದಿತ ವಯೋಮಿತಿಯಲ್ಲಿರುವುದು. **(ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 166 ಸೆನೆನಿ 2024 ಬೆಂಗಳೂರು, ದಿನಾಂಕ: 10.09.2024)** ರನ್ವಯ ಒಂದು ಬಾರಿಗೆ ಮಾತ್ರ ಅನ್ವಯವಾಗುವಂತೆ. | | |
| **ಕ್ರಸಂ** | **ಪ್ರವರ್ಗ** | **ಕನಿಷ್ಠ ವಯೋಮಿತಿ** | **ಗರಿಷ್ಠ ವಯೋಮಿತಿ** |
| A | ಸಾಮಾನ್ಯ | 18 ವರ್ಷಗಳು | 38 ವರ್ಷಗಳು |
| B | ಇತರೆ ಹಿಂದುಳಿದ ವರ್ಗಗಳು | 18 ವರ್ಷಗಳು | 41 ವರ್ಷಗಳು |
| C | ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಪ್ರವರ್ಗ-1 | 18 ವರ್ಷಗಳು | 43 ವರ್ಷಗಳು |
| 3 | ಜಿಲ್ಲಾ ಆಯುಷ್ ಅಧಿಕಾರಿಗಳ ಬಳಿ ಕರ್ತವ್ಯಕ್ಕೆ ಹಾಜರಾಗುವಾಗ ತಮ್ಮ ಶೈಕ್ಷಣಿಕ ವಿದ್ಯಾರ್ಹತೆಗಳ ಪ್ರಮಾಣ ಪತ್ರ ವಯಸ್ಸಿನ & ವಾರ್ಷಿಕ ಆದಾಯ ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಹಾಜರಪಡಿಸುವುದು. | | |
| 4 | ಕೇಂದ್ರ ಸ್ಥಾನದಲ್ಲಿ ತಂಗಿದ್ದು24 ಗಂಟೆಗಳಲ್ಲೂ ಯಾವುದೇ ತುರ್ತು ಸೇವೆಗೆ ಲಭ್ಯವಿದ್ದು ಸೇವೆ ಸಲ್ಲಿಸುವ ಷರತ್ತಿಗೆ ಒಳಪಟ್ಟಿರಬೇಕು. | | |
| 5 | ತೃಪ್ತಿಕರವಾದ ಕರ್ತವ್ಯ ನಿರ್ವಹಣೆ ಷರತ್ತಿಗೆ ಒಳಪಟ್ಟು ಪ್ರತಿ ತಿಂಗಳು ಸಂಚಿತ ವೇತನವನ್ನು ಮಾತ್ರ ಪಡೆಯುವುದು. | | |
| 6 | ಗುತ್ತಿಗೆ ಆಧಾರದ ತಾತ್ಕಾಲಿಕ ನೇಮಕಾತಿಯನ್ನು ಯಾವುದೇ ಸಮಯದಲ್ಲಿ ಕಾರಣವಿಲ್ಲದೇ ಅಥವಾ ಸರ್ಕಾರ ಉಭಯ ಪಕ್ಷಗಳು ಒಂದು ತಿಂಗಳು ನೋಟಿಸ್ ಕೊಟ್ಟು ಸೇವೆಯನ್ನು ಪರ್ಯವಸನಗೊಳಿಸುವ ಷರತ್ತಿಗೊಳಪಟ್ಟಿರುತ್ತದೆ. | | |
| 7 | ದುರ್ನಡತೆಯಿಂದಾಗಿ ಸರ್ಕಾರಕ್ಕೆ ನಷ್ಟ ಉಂಟಾದಲ್ಲಿ ಅದನ್ನು ಸರ್ಕಾರಕ್ಕೆ ತುಂಬಿ ಕೊಡುವುದು. | | |
| 8 | ಖಾಯಂ ನೇಮಕಾತಿಗಾಗಲಿ, ವಿಶ್ರಾಂತಿ ವೇತನಕ್ಕಾಗಲೀ, ನಿವೃತ್ತ ಉಪದಾನಕ್ಕಾಗಲೀ, ವೇತನ ಶ್ರೇಣಿಗಾಗಲೀ ಅಥವಾ ಯಾವುದೇ ಭತ್ಯೆಗಳನ್ನು ಪಡೆಯುವ ಹಕ್ಕನ್ನು ಹೊಂದಿರುವುದಿಲ್ಲ. | | |
| 9 | ಗುತ್ತಿಗೆ ಆಧಾರದ ತಾತ್ಕಾಲಿಕ ನೇಮಕಾತಿಯು ನಿರ್ದಿಷ್ಟ ಆಸ್ಪತ್ರೆಗೆ ಆಗಿರುವುದರಿಂದ ಯಾವುದೇ ಬೇರೆ ಆಸ್ಪತ್ರೆಗಾಗಲೀ ಅಥವಾ ಬೇರೆ ಸ್ಥಳಕ್ಕೆ ವರ್ಗಾವಣೆ ಅಥವಾ ಪ್ರತಿ ನಿಯೋಜನೆ ಪಡೆಯಲು ಹಕ್ಕಿರುವುದಿಲ್ಲ. | | |
| 10 | ಎಲ್ಲ ಹುದ್ದೆಗಳು ತಾತ್ಕಾಲಿಕವಾಗಿದ್ದು **31.03.2025**ರ ವರೆಗೆ ಚಾಲ್ತಿಯಲ್ಲಿರುತ್ತವೆ. | | |
| 11 | ಮೀಸಲಾತಿ ಮೇಲೆ ನೇಮಕಾತಿ ಬಯಸುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ /ವಾರ್ಷಿಕ ಮೀಸಲಾತಿ ಆದಾಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸುವುದು. | | |

ಜಿಲ್ಲಾ ಆಯುಷ್ ಅಧಿಕಾರಿಗಳು, ಬಾಗಲಕೋಟೆ

ಜಿಲ್ಲಾ ಆಯುಷ್ ಅಧಿಕಾರಿಗಳು
ಬಾಗಲಕೋಟೆ

## ಸಂಬಂಧ ಪಟ್ಟ ಹುದ್ದೆಗಳಿಗಾಗಿ ಅರ್ಜಿ ನಮೂನೆಗಳೊಂದಿಗೆ ಆನ್‌ಲೈನ್‌ನಲ್ಲಿ ಅಪ್ಲೋಡ್ ಮಾಡಬೇಕಾದ ದಾಖಲಾತಿ ವಿವರಗಳು.

**1. ತಜ್ಞ ವೈದ್ಯರು**

1. ಎಸ್.ಎಸ್.ಎಲ್.ಸಿ ಮಾರ್ಕ್ಸ್‌ಕಾರ್ಡ
2. ಬಿ.ಎ.ಎಂ.ಎಸ್ ಡಿಗ್ರಿ ಸರ್ಟಿಫಿಕೇಟ್ (ಕಾನ್ವಕೇಶನ್)
3. 1ನೇ ವರ್ಷದಿಂದ ಕೊನೆಯ ವರ್ಷದ ಬಿ.ಎ.ಎಂ.ಎಸ್ ಮಾರ್ಕ್ಸ್‌ಕಾರ್ಡಗಳು
4. ಹೌಸ ಸರ್ಜನ್ಸ್ ಕಂಪ್ಲಿಶನ್ ಸರ್ಟಿಫಿಕೇಟ್
5. ರಿಜಿಸ್ಟ್ರೇಶನ್ ಸರ್ಟಿಫಿಕೇಟ್ (ಕೆ.ಎ.ಯು.ಪಿ)
6. ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರ
7. ಕನ್ನಡ ಮಾಧ್ಯಮ
8. ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ.

10. ಸ್ನಾತಕೋತ್ತರ ಪದವಿ ಪ್ರಮಾಣ ಪತ್ರ
11. ಅಂಗವಿಕಲ ಪ್ರಮಾಣ ಪತ್ರ

**2. ಔಷಧಿ ವಿತರಕರು.**

1. ಎಸ್.ಎಸ್.ಎಲ್.ಸಿ ಮಾರ್ಕ್ಸ್‌ಕಾರ್ಡ
2. ಬಿ–ಫಾರ್ಮ ಸರ್ಟಿಫಿಕೇಟ್
3. ಬಿ/–ಫಾರ್ಮ ಮಾರ್ಕ್ಸ್‌ಕಾರ್ಡ
4. ಡಿ–ಫಾರ್ಮ ಸರ್ಟಿಫಿಕೇಟ್
5. ಡಿ/–ಫಾರ್ಮ ಮಾರ್ಕ್ಸ್‌ಕಾರ್ಡ
6. ಫಾರ್ಮಸಿ ಕೌನ್ಸಿಲ್ ನೊಂದಣಿ ಪ್ರಮಾಣ ಪತ್ರ
7. ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರ
8. ಕನ್ನಡ ಮಾಧ್ಯಮ
9. ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ.
10. ಕಂಪ್ಯೂಟರ್ ಪ್ರಮಾಣ ಪತ್ರ.
11. 02 ವರ್ಷಗಳ ಅನುಭವ ಪ್ರಮಾಣ ಪತ್ರ. (ಆಸ್ಪತ್ರೆ/ಚಿಕಿತ್ಸಾಲಯ/ಫಾರ್ಮಸಿಗಳಲ್ಲಿ ಕರ್ತವ್ಯ ನಿರ್ವಹಿಸಿರಬೇಕು)

**3. ಮಸಾಜಿಸ್ಟ್ (ಪುರುಷ/ಮಹಿಳಾ)**

1. 10ನೇ ತರಗತಿ ಪಾಸಾದ ಮಾರ್ಕ್ಸ್‌ಕಾರ್ಡ
2. ಟಿ.ಸಿ/ಎಲ್.ಸಿ 10ನೇ ತರಗತಿ
3. ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರ
4. ಕನ್ನಡ ಮಾಧ್ಯಮ
5. 02 ವರ್ಷಗಳ ಅನುಭವ ಪ್ರಮಾಣ ಪತ್ರ. (ಆಸ್ಪತ್ರೆ/ಚಿಕಿತ್ಸಾಲಯಗಳಲ್ಲಿ ಕರ್ತವ್ಯ ನಿರ್ವಹಿಸಿರಬೇಕು)

**4. ಕ್ಷಾರ ಸೂತ್ರ ಅಟೆಂಟೆಂಟ್**

1. ಎಸ್.ಎಸ್.ಎಲ್.ಸಿ ಮಾರ್ಕ್ಸ್‌ಕಾರ್ಡ
2. ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರ
3. ಕನ್ನಡ ಮಾಧ್ಯಮ
4. 02 ವರ್ಷಗಳ ಅನುಭವ ಪ್ರಮಾಣ ಪತ್ರ. (ಆಸ್ಪತ್ರೆ/ಚಿಕಿತ್ಸಾಲಯಗಳಲ್ಲಿ ಕರ್ತವ್ಯ ನಿರ್ವಹಿಸಿರಬೇಕು)

5. ಬಹು ಉದ್ದೇಶಿತ ಆರೋಗ್ಯ ಕಾರ್ಯಕರ್ತ

1. 10ನೇ ತರಗತಿ ಪಾಸಾದ ಮಾರ್ಕ್ಸ್‌ಕಾರ್ಡ
2. ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರ
3. ಕನ್ನಡ ಮಾಧ್ಯಮ
5. 01 ವರ್ಷದ ಅನುಭವ ಪ್ರಮಾಣ ಪತ್ರ. (ಆಸ್ಪತ್ರೆ/ಚಿಕಿತ್ಸಾಲಯಗಳಲ್ಲಿ ಕರ್ತವ್ಯ ನಿರ್ವಹಿಸಿರಬೇಕು)
6. ಕಂಪ್ಯೂಟರ್ ಪ್ರಮಾಣ ಪತ್ರ

ಜಿಲ್ಲಾ ಆಯುಷ್ ಅಧಿಕಾರಿಗಳು, ಬಾಗಲಕೋಟೆ

ಜಿಲ್ಲಾ ಆಯುಷ್ ಅಧಿಕಾರಿಗಳು
ಬಾಗಲಕೋಟ

## ಅಭ್ಯರ್ಥಿಗಳಿಗೆ ವಿಶೇಷ ಸೂಚನೆಗಳು,

1. **ವಯೋಮಿತಿ**

**(ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 166 ಸೆನೆನಿ 2024 ಬೆಂಗಳೂರು, ದಿನಾಂಕ: 10.09.2024) ರನ್ವಯ ಒಂದು ಬಾರಿಗೆ ಮಾತ್ರ ಅನ್ವಯವಾಗುವಂತೆ.** ದಿನಾಂಕ: 26.11.2024 ರಂದು ಕನಿಷ್ಠ 18 ವರ್ಷ ಗರಿಷ್ಠ ಸಾಮಾನ್ಯ ಅಭ್ಯರ್ಥಿಗಳಿಗೆ 38 ವರ್ಷ, ಪ್ರ, ವರ್ಗ–1 ಮತ್ತು ಪ.ಜಾ/ಪ.ಪಂ ಪಂಗಡ ಅಭ್ಯರ್ಥಿಗಳಿಗೆ ಕನಿಷ್ಠ 18 ವರ್ಷ ಗರಿಷ್ಠ 43 ವರ್ಷ ಹಾಗೂ 2ಎ, 2ಬಿ, 3ಎ ಹಾಗೂ 3ಬಿ ಅಭ್ಯರ್ಥಿಗಳಿಗೆ ಕನಿಷ್ಠ 18 ವರ್ಷ ಗರಿಷ್ಠ 41 ವರ್ಷ ಮೀರಿರಬಾರದು.

2. **ಜಾತಿ ಪ್ರಮಾಣ ಪತ್ರ.**

ಜಾತಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕ :18.12.2024ಕ್ಕೆ ಚಾಲ್ತಿಯಲ್ಲಿರುವಂತೆ ಸಂಬಂಧಿಸಿದ ತಹಶೀಲದಾರರಿಂದ ಪಡೆದಿರಬೇಕು

3. ಆನ್‌ಲೈನ್ ಅರ್ಜಿಯಲ್ಲಿ ಭರ್ತಿ ಮಾಡಿರುವ ಮೀಸಲಾತಿಯನ್ನು ಮಾತ್ರ ಪರಿಗಣಿಸಲಾಗುವುದು. ಹೆಚ್ಚಿನ ವಿದ್ಯಾರ್ಹತೆ ಅಥವಾ ತದನಂತರದ ಮೀಸಲಾತಿ ಪರಿಗಣನೆಗೆ ಅವಕಾಶವಿರುವುದಿದಲ್ಲ.
4. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸಿದ್ದಲ್ಲಿ ಹುದ್ದೆವಾರು ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು, ಒಂದೇ ಅರ್ಜಿಯಲ್ಲಿ ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಪಕ್ಷದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
5. ಎಲ್ಲಾ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಮಾತ್ರ ಅರ್ಜಿಯನ್ನು ಸಲ್ಲಿಸುವುದು. ಆನ್‌ಲೈನ್ ಹೊರತುಪಡಿಸಿ ಇತರೆ ಯಾವುದೇ ರೀತಿ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದೊಳಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅಪೂರ್ಣ ಅರ್ಜಿಗಳನ್ನು ತಿರಿಸ್ಕರಿಸಲಾಗುವುದು.
6. **ಜನ್ಮ ದಿನಾಂಕ ದೃಢೀಕರಣ ಪತ್ರ :–** ಎಸ್.ಎಸ್.ಎಲ್.ಸಿ/ ಜನನ ಪ್ರಮಾಣ ಪತ್ರ/ತತ್ಸಮಾನ ವಿದ್ಯಾರ್ಹತೆಯ ಅಂಕಪಟ್ಟಿ ಅಥವಾ ಶಾಲಾ ವರ್ಗಾವಣೆ ಪ್ರಮಾಣ ಪತ್ರ ಅಥವಾ ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತಭಾಗ (Extract of Cumulative Record)
7. **ಗ್ರಾಮೀಣ ಅಭ್ಯರ್ಥಿ ಮೀಸಲಾತಿ:–** 01 ರಿಂದ 10ನೇ ತರಗತಿವರೆಗೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ನಿಗದಿತ ನಮೂನೆಯಲ್ಲಿ ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರವನ್ನು ಮುಖ್ಯೋಪಾಧ್ಯಾಯರಿಂದ ಪಡೆದು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಮಾಡಿಸಿರತಕ್ಕದ್ದು.
8. **ಕನ್ನಡ ಮಾಧ್ಯಮ ಅಭ್ಯರ್ಥಿ:–** 01 ರಿಂದ 10ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ನಿಗದಿತ ನಮೂನೆಯಲ್ಲಿ ಕನ್ನಡ ಮಾಧ್ಯಮ ಅಭ್ಯರ್ಥಿ ಪ್ರಮಾಣ ಪತ್ರವನ್ನು ಮುಖ್ಯೋಪಾಧ್ಯಾಯರಿಂದ ಪಡೆದು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಮಾಡಿಸಿರತಕ್ಕದ್ದು.
9. **ಅಂಗವಿಕಲ ಅಭ್ಯರ್ಥಿ ಮೀಸಲಾತಿ:–** ಸರ್ಕಾರ ಅಧಿಸೂಚನೆ ಸಂಖ್ಯೆ: ಸಿಆಸುಇ/115/ಸೇನನಿ/2005, ದಿನಾಂಕ: 19.11.2005ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಅಂಗವಿಕಲ ಪ್ರಮಾಣ ಪತ್ರವನ್ನು ಸರ್ಕಾರಿ ಆಸ್ಪತ್ರೆಗಳಲ್ಲಿನ ವೈದ್ಯಕೀಯ ಮಂಡಳಿಯಿಂದ ಪಡೆದಿರಬೇಕು.
10. **ಮಾಜಿ ಸೈನಿಕರ ಮೀಸಲಾತಿ:–** ಆನ್‌ಲೈನ್ ಅರ್ಜಿಯಲ್ಲಿ ಮಾಜಿ ಸೈನಿಕ ಮೀಸಲಾತಿಯನ್ನು ಕೋರಿರುವ ಅಭ್ಯರ್ಥಿಗಳು ಸೇವೆಯಿಂದ ಬಿಡುಗಡೆಯಾದ ನಂತರ ನೀಡಿದ ಬಿಡುಗಡೆ ಪ್ರಮಾಣ ಪತ್ರವನ್ನು ಹಾಜರು ಪಡಿಸತಕ್ಕದ್ದು.
11. **ತಜ್ಞ ವೈದ್ಯರ ಹುದ್ದೆಗೆ** ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಸಂಬಂಧಿಸಿದ ನೊಂದಣಿ ಪ್ರಾಧಿಕಾರಗಳಿಂದ ನೊಂದಣಿ ಮಾಡಿಸಿರಬೇಕು. ತಮ್ಮ ವಿದ್ಯಾರ್ಹತೆಯ ಕ್ಷೇತ್ರದಲ್ಲಿ ಆಯುಷ್ ಆಸ್ಪತ್ರೆ/ಚಿಕಿತ್ಸಾಲಯಗಳಲ್ಲಿ ಕನಿಷ್ಠ 03 ವರ್ಷಗಳ ಸೇವೆ ಸಲ್ಲಿಸಿದ ಅನುಭವ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು.
12. **ಔಷಧ ವಿತರಕರ ಹುದ್ದೆಗೆ** ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಸಂಬಂಧಿಸಿದ ನೊಂದಣಿ ಪ್ರಾಧಿಕಾರಗಳಿಂದ ನೊಂದಣಿ ಮಾಡಿಸಿರಬೇಕು. ಹಾಗೂ ಆಯುಷ್ ಆಸ್ಪತ್ರೆ/ಚಿಕಿತ್ಸಾಲಯಗಳಲ್ಲಿ ಕನಿಷ್ಠ 02 ವರ್ಷಗಳ ಸೇವೆ ಸಲ್ಲಿಸಿದ ಅನುಭವ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು.
13. **ಸದರಿ ಹುದ್ದೆಗಳಿಗೆ ಗುತ್ತಿಗೆ ಅವಧಿಯು ದಿನಾಂಕ: 31.03.2025ರ ವರೆಗೆ ಚಾಲ್ತಿಯಲ್ಲಿರುತ್ತದೆ.**
14. ಮಾನ್ಯ ಜಿಲ್ಲಾಧಿಕಾರಿಗಳು, ಬಾಗಲಕೋಟೆ ಹಾಗೂ ಅಧ್ಯಕ್ಷರು, ಜಿಲ್ಲಾ ಆಯುಷ್ ಸಮಿತಿ ಬಾಗಲಕೋಟೆ ಇವರ ಅಧ್ಯಕ್ಷತೆಯಲ್ಲಿ ಆಯ್ಕೆ ಪ್ರಕ್ರಿಯೆಯನ್ನು ಮೇರಿಟ್ ಕಂ ರೋಸ್ಟರ್ ಮೂಲಕ ಮೀಸಲಾತಿ ನಿಯಮಗಳನ್ವಯ ನೇಮಕಾತಿ ಮಾಡಲಾಗುವುದು. ಎಲ್ಲಾ ಹುದ್ದೆಗಳು ಗುತ್ತಿಗೆ ಆಧಾರದ ಮೇಲೆ ಸಂಪೂರ್ಣ ತಾತ್ಕಾಲಿಕ ಹುದ್ದೆಗಳಾಗಿದ್ದು, ಕಾಲ ಕಾಲಕ್ಕೆ ಸರ್ಕಾರದಿಂದ/ಆಯುಷ್ ನಿರ್ದೇಶನಾಲಯದಿಂದ ಹೊರಡಿಸುವ ಆದೇಶದ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತವೆ.
15. ಅರ್ಜಿಗಳನ್ನು ಸಲ್ಲಿಸಲು ಯಾವುದೇ ಶುಲ್ಕ ವಿರುವುದಿಲ್ಲ.
16. ಪ್ರಸ್ತುತ ಸಿ.ಎಸ್.ಎಸ್ ಅಡಿಯಲ್ಲಿ ವರ್ಗಾವಣೆ ಪ್ರಕ್ರಿಯೆಯು ಆರಂಭಗೊಂಡಿದ್ದು, ನೇಮಕಾತಿಗಾಗಿ ಪರಿಗಣಿಸಲಾದ ಖಾಲಿ ಹುದ್ದೆಗಳಿಗೆ ವರ್ಗಾವಣೆಯ ಮೇಲೆ ಭರ್ತಿಯಾಗಿದ್ದರೆ. ಈ ಪ್ರಕ್ರಿಯೆಯಲ್ಲಿ ನೇಮಕಗೊಳ್ಳುವ ಅಭ್ಯರ್ಥಿಗಳನ್ನು ವರ್ಗಾವಣೆಯಿಂದ ಖಾಲಿಯಾಗುವ ಸ್ಥಳಗಳಿಗೆ ನಿಯುಕ್ತಿಗೊಳಿಸಲಾಗುವುದು.

ಜಿಲ್ಲಾ ಆಯುಷ್ ಅಧಿಕಾರಿಗಳು, ಬಾಗಲಕೋಟೆ.
ಜಿಲ್ಲಾ ಆಯುಷ್ ಅಧಿಕಾರಿಗಳು
ಬಾಗಲಕೋಟೆ

## ಆಯ್ಕೆ ಪ್ರಕ್ರಿಯೆ

1. **ತಜ್ಞ ವೈದ್ಯರು:-** ಸ್ನಾತ್ತಕೋತ್ತರ ಪದವಿ ವೈದ್ಯರನ್ನು ಆಯ್ಕೆ ಮಾಡಲು ಅಧಿಸೂಚನೆಯ ಕನಿಷ್ಠ ವಿದ್ಯಾರ್ಹತೆಯಲ್ಲಿ ತಿಳಿಸಿರುವಂತೆ ಪರಿಗಣಿಸಿ, ಅಭ್ಯರ್ಥಿಗಳು ಪದವಿಯಲ್ಲಿ ಪಡೆದಿರುವ ಎಲ್ಲಾ ಪರೀಕ್ಷೆಗಳ ಅಂಕಗಳನ್ನು ಒಟ್ಟುಗೂಡಿಸಿ ಶೇಕಡಾವಾರು ಅಂಕಗಳಿಗೆ ಲೆಕ್ಕ ಮಾಡಿ ಮೇರಿಟ್ ಹಾಗೂ ಮೀಸಲಾತಿಯನ್ವಯ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು.
2. **ಔಷಧ ವಿತರಕರು:-** ಔಷಧ ವಿಜ್ಞಾನದಲ್ಲಿ ಅಧಿಸೂಚನೆಯ ಕನಿಷ್ಠ ವಿದ್ಯಾರ್ಹತೆಯಲ್ಲಿ ತಿಳಿಸಿರುವಂತೆ ಪರಿಗಣಿಸಿ, ಬಿ-ಫಾರ್ಮಾ ಅಥವಾ ಡಿ-ಫಾರ್ಮಾ ವಿದ್ಯಾರ್ಹತೆಯಲ್ಲಿ ಎಲ್ಲಾ ಪರೀಕ್ಷೆಗಳ ಅಂಕಗಳನ್ನು ಒಟ್ಟುಗೂಡಿಸಿ ಶೇಕಡಾವಾರು ಅಂಕಗಳಿಗೆ ಲೆಕ್ಕ ಮಾಡಿ ಮೇರಿಟ್ ಹಾಗೂ ಮೀಸಲಾತಿಯನ್ವಯ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು.
3. **ಮಸಾಜಿಸ್ಟ್:-** ಮಸಾಜಿಸ್ಟ್ ತರಬೇತಿಯೊಂದಿಗೆ ಅಧಿಸೂಚನೆಯ ಕನಿಷ್ಠ ವಿದ್ಯಾರ್ಹತೆಯಲ್ಲಿ ತಿಳಿಸಿರುವಂತೆ ಪರಿಗಣಿಸಿ, ಅಭ್ಯರ್ಥಿಗಳು 10ನೇ ತರಗತಿ ವಿದ್ಯಾರ್ಹತೆಯಲ್ಲಿ ಪಡೆದಿರುವ ಅಂಕಗಳನ್ನು ಒಟ್ಟುಗೂಡಿಸಿ ಶೇಕಡಾವಾರು ಅಂಕಗಳಿಗೆ ಲೆಕ್ಕ ಮಾಡಿ ಮೇರಿಟ್ ಹಾಗೂ ಮೀಸಲಾತಿಯನ್ವಯ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು.
4. **ಕ್ಷಾರ ಸೂತ್ರ ಅಟೆಂಡರ್:-** ಕ್ಷಾರ ಸೂತ್ರ ಅಟೆಂಡರ್ ತರಬೇತಿಯೊಂದಿಗೆ ಅಧಿಸೂಚನೆಯ ಕನಿಷ್ಠ ವಿದ್ಯಾರ್ಹತೆಯಲ್ಲಿ ತಿಳಿಸಿರುವಂತೆ ಪರಿಗಣಿಸಿ, ಅಭ್ಯರ್ಥಿಗಳು 10ನೇ ತರಗತಿ ವಿದ್ಯಾರ್ಹತೆಯಲ್ಲಿ ಪಡೆದಿರುವ ಅಂಕಗಳನ್ನು ಒಟ್ಟುಗೂಡಿಸಿ ಶೇಕಡಾವಾರು ಅಂಕಗಳಿಗೆ ಲೆಕ್ಕ ಮಾಡಿ ಮೇರಿಟ್ ಹಾಗೂ ಮೀಸಲಾತಿಯನ್ವಯ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು.
5. **ಬಹು ಉದ್ದೇಶಿತ ಆರೋಗ್ಯ ಕಾರ್ಯಕರ್ತ:-** ಅಭ್ಯರ್ಥಿಗಳು ಅಧಿಸೂಚನೆಯ ಕನಿಷ್ಠ ವಿದ್ಯಾರ್ಹತೆಯಲ್ಲಿ ತಿಳಿಸಿರುವಂತೆ ಪರಿಗಣಿಸಿ, ಅಭ್ಯರ್ಥಿಗಳು 10ನೇ ತರಗತಿ ವಿದ್ಯಾರ್ಹತೆಯಲ್ಲಿ ಪಡೆದಿರುವ ಅಂಕಗಳನ್ನು ಒಟ್ಟುಗೂಡಿಸಿ ಶೇಕಡಾವಾರು ಅಂಕಗಳಿಗೆ ಲೆಕ್ಕ ಮಾಡಿ ಮೇರಿಟ್ ಹಾಗೂ ಮೀಸಲಾತಿಯನ್ವಯ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು.

ಜಿಲ್ಲಾ ಆಯುಷ್ ಅಧಿಕಾರಿಗಳು, ಬಾಗಲಕೋಟೆ

ಜಿಲ್ಲಾ ಆಯುಷ್ ಅಧಿಕಾರಿಗಳು
ಬಾಗಲಕೋಟೆ

(ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 166 ಸೆಸೇನಿ 2024 ಬೆಂಗಳೂರು, ದಿನಾಂಕ: 10.09.2024) ರನ್ವಯ ಒಂದು ಬಾರಿಗೆ ಮಾತ್ರ ಅನ್ವಯವಾಗುವಂತೆ.

| ಕ್ರ ಸಂ | ವರ್ಗಗಳ ವಿವರ | ವಯೋಮಿತಿ | | | |
|---|---|---|---|---|---|
| | | ಕನಿಷ್ಠ | ಗರಿಷ್ಠ | | |
| | | | ಸಾಮಾನ್ಯ | ಪ್ರವರ್ಗ–2(ಎ)/2(ಬಿ)/3(ಎ)/3(ಬಿ) | ಪ. ಜಾ/ಪ.ಪಂ/ಪ್ರವರ್ಗ–1 |
| 1 | ಸಾಮಾನ್ಯ | 18 ವರ್ಷ | 38 ವರ್ಷ | 41 ವರ್ಷ | 43 ವರ್ಷ |
| 2 | ಪ್ರವರ್ಗ–2(ಎ)/2(ಬಿ)/3(ಎ)/3(ಬಿ) | 18 ವರ್ಷ | 41 ವರ್ಷ | | |
| 3 | ಪ. ಜಾ/ಪ.ಪಂ/ಪ್ರವರ್ಗ–1 | 18 ವರ್ಷ | 43 ವರ್ಷ | | |
| | **ವಯೋಮಿತಿ ಸಡಿಲಿಕೆ** | | | | |
| 4 | ಮಾಜಿ ಸೈನಿಕರು | 18 ವರ್ಷ | ಸೇವೆ ಸಲ್ಲಿಸಿರುವಷ್ಟು ವರ್ಷಗಳಿಗೆ 03 ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳಾಗುವುದೋ ಅಷ್ಟು ವರ್ಷಗಳು | | |
| 5 | ವಿಧವೆಯರು(ಅಭ್ಯರ್ಥಿಯ ಸಕ್ಷಮ ಪ್ರಾಧಿಕಾರದಿಂದ ತಾನು ವಿಧವೆಯೆಂದು ಹಾಗೂ ಮರು ಮದುವೆಯಾಗಿರುವುದಿಲ್ಲವೆಂಬ ಪ್ರಮಾಣ ಪತ್ರ) | 1[illegible] ವರ್ಷ | 10 ವರ್ಷಗಳು | | |
| 6 | ವಿಶೇಷಚೇತನ ಅಭ್ಯರ್ಥಿಗಳಿಗೆ | 18 ವರ್ಷ | 10 ವರ್ಷಗಳು | | |

ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 19.11.2024

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 18.12.2024

ಜಿಲ್ಲಾ ಆಯುಷ್ ಅಧಿಕಾರಿಗಳು, ಬಾಗಲಕೋಟೆ.

ಜಿಲ್ಲಾ ಆಯುಷ್ ಅಧಿಕಾರಿಗಳು
ಬಾಗಲಕೋಟೆ